ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 65/2013

(ಫ್ರಾಸಾ-11 ಚಾಸಾ-17)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 14.01.2026.

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಮಲಿಂಗಪ್ಪ |
| ತಂದೆಯ ಹೆಸರು | - | ಎನ್ ಎಲ್ ಮಾದಯ್ಯ |
| ವಯಸ್ಸು | - | 69 ವರ್ಷ, |
| ಉದ್ಯೋಗ | - | ನಿವೃತ್ತ ಡಿವೈಎಸ್ಪಿ |
| ವಾಸ | - | ಬೆಂಗಳೂರು |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಸೆಪ್ಟಂಬರ್ 2012 ರಿಂದ ಏಪ್ರಿಲ್ 2014 ರವರೆಗೆ ರಾಮನಗರ ಉಪವಿಭಾಗದ ಡಿವೈಎಸ್ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ತಲಘಟ್ಟಪುರ ಪೋಲಿಸ್ ಠಾಣೆ ರಾಮನಗರ ಉಪವಿಭಾಗದಲ್ಲಿ ಬರುತ್ತಿತ್ತು.

2. ದಿಃ07.09.2012 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಕಡತದೊಂದಿಗೆ ಶಾಂತನು ಸಿನ್ಹ, ಎಎಸ್‌ಪಿ, ಇವರಿಂದ ಕಡತವನ್ನು ವಹಿಸಿ ಪರಿಶೀಲಿಸಿರುತ್ತೇನೆ. ದಿಃ11.09.2012 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-2 ಮತ್ತು 3 ಇವರು ನಿಪಿ-2 ಮತ್ತು 3 ರಂತೆ ಹೇಳಿಕೆ ನೀಡಿರುತ್ತಾರೆ. ಅದೇ ದಿನ ವೈದ್ಯರು, ಸಿದ್ದಲಿಂಗಪ್ಪ ಮೆಮೋರಿಯಲ್ ಆಸ್ಪತ್ರೆ, ಕೋಣನಕುಂಟೆ, ಇವರಿಗೆ ಚಾಸಾ-1 ಇವರ ಗಾಯದ ಪ್ರಮಾಣ ಪತ್ರ ಕೋರಿ ಮನವಿ ಸಲ್ಲಿಸಿರುತ್ತೇನೆ.

3. ದಿಃ30.09.2012 ರಂದು ಚಾಸಾ-13 ರವರಿಂದ ಚಾಸಾ-1 ರವರ ಗಾಯದ

ಪ್ರಮಾಣಪತ್ರವನ್ನು ನಿಪಿ-7 ರಂತೆ ಪಡೆದಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ದಿಃ20.10.2012 ರಂದು 1, 3 ಮತ್ತು 4 ನೇ ಆರೋಪಿತರು ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಅವರನ್ನು ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆ ಪಡೆದು ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ.

4. 3 ನೇ ಆರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ, ಕೃತ್ಯಕ್ಕೆ ಬಳಸಿದ ಬಿಯರ್ ಬಾಟಲ್ ಅನ್ನು ಬಿಸಾಡಿದ ಜಾಗವನ್ನು ತೋರಿಸಿ ಬಿಯರ್ ಬಾಟಲ್ ಚೂರನ್ನು ತೆಗೆದುಕೊಡುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಸಾಕ್ಷಿ ಸಹಿಯನ್ನು ನಿಪಿ-8(ಎ), 3 ನೇ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-8(ಬಿ) ಎಂದು ಗುರುತಿಸಲಾಯಿತು.

5. 3 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಆಧಾರದ ಮೇರೆಗೆ, ಚಾಸಾ-8 ಮತ್ತು 9 ಇವರನ್ನು ಠಾಣೆಗೆ ಕರೆಸಿ ಅಲ್ಲಿಂದ 3 ನೇ ಆರೋಪಿಯು ತೋರಿಸಿದ ಸ್ಥಳವಾದ ತಲಘಟ್ಟಪುರದ ಜ್ಞಾನಸ್ವೀಕಾರ ಶಾಲೆಯ ಮುಂಭಾಗಕ್ಕೆ ಭೇಟಿ ನೀಡಿದ್ದು 3 ನೇ ಅರೋಪಿ ಅಲ್ಲಿ ಗಿಡದ ಪೊದೆಯಿಂದ ಬಿಯರ್ ಬಾಟಲ್ ನ ಚೂರುಗಳನ್ನು ಎತ್ತಿಕೊಟ್ಟಿದ್ದು ಅವುಗಳನ್ನು ಚಾಸಾ-8 ಮತ್ತು 9 ಪಂಚರ ಸಮಕ್ಷಮ ವಶಕ್ಕೆ ಪಡೆದು ಬಟ್ಟೆ ಚೀಲದಲ್ಲಿ ಹಾಕಿ ಎಮ್ ಆರ್ ಎಂಬ ಅಕ್ಷರದಿಂದ ಸೀಲ್ ಮಾಡಿ ಸಂಜೆ 4 ರಿಂದ 05.00 ಘಂಟೆಯವರೆಗೆ ನಿಪಿ-5 ರಂತೆ ಪಂಚನಾಮೆ ಕ್ರಮ ಅನುಸರಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ವಾಪಸ್ಸಾಗಿ ಅಲ್ಲಿ ಸದರಿ ಮುದ್ದೆಮಾಲನ್ನು ಮಾಲುಟ್ಟಿ ಸಂಖ್ಯೆ 388/2012 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಮು.ಮಾ-1 ಬಿಯರ್ ಬಾಟಲ್ ನ ಚೂರುಗಳನ್ನು ನೋಡಿ ಗುರುತಿಸಿರುತ್ತಾರೆ.

6. ದಿಃ30.11.2012 ರಂದು ಆರೋಪಿತರ ಜಾತಿಯ ವರದಿಯನ್ನು ಚಾಸಾ-

14 ರವರಿಂದ ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ನಿಪಿ-9 ಎಂದು ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ.

7. ದಿಃ01.01.2013 ರಂದು ಆರೋಪಿತರು ಕೃತ್ಯಕ್ಕೆ ಬಳಸಿದ್ದ ಟಾಟಾ ಸುಮೋ ವಾಹನ ಸಂಖ್ಯೆ ಕೆಎ-01-ಎಎ-432 ವನ್ನು ಚಾಸಾ-12 ರವರು ಠಾಣೆಯಲ್ಲಿ ಹಾಜರುಪಡಿಸಿ ವರದಿ ನೀಡಿದ್ದು ಚಾಸಾ-9 ಮತ್ತು 10 ರವರ ಸಮಕ್ಷಮ ಸಂಜೆ 04.30 ರಿಂದ 05.30 ರವರೆಗೆ ಪಂಚನಾಮೆ ಕ್ರಮ ಅನುಸರಿಸಿ ಅಮಾನತುಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 5/2013 ರಲ್ಲಿ ಅಳವಡಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-10 ಎಂದು ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಚಾಸಾ-12 ರವರ ವರದಿಯನ್ನು ನಿಪಿ-11 ಎಂದು ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

8. ದಿಃ04.02.2013 ರಂದು ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ15.02.2013 ರಂದು ಚಾಸಾ-1 ರವರ ಜಾತಿ ಪ್ರಮಾಣ ಪತ್ರ ನೀಡುವಂತೆ ಮರುಜ್ಞಾಪನ ನೀಡಿರುತ್ತೇನೆ. ದಿಃ24.03.2013 ರಂದು ಚಾಸಾ-1 ರವರ ಜಾತಿಯ ವರದಿಯನ್ನು ಚಾಸಾ-14 ರವರಿಂದ ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ನಿಪಿ-12 ಎಂದು ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸದರಿ ವರದಿಯಲ್ಲಿ ಸ್ವೀಕರಿಸಿದ ದಿನಾಂಕವನ್ನು ಕೈತಪ್ಪಿನಿಂದ ದಿಃ04.02.2013 ರಂದು ಬರೆದಿರುತ್ತೇನೆ. ತನಿಖೆ ಪೂರ್ಣಗೊಳಿಸಿ 1 ನೇ ಆರೋಪಿ ತಲೆಮರೆಸಿಕೊಂಡ ಆರೋಪಿ ಎಂದು ನಮೂದಿಸಿ ದಿಃ30.07.2013 ರಂದು ಆರೋಪಿತರ ವಿರುದ್ಧ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. 3 ಮತ್ತು 4 ನೇ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರ ಶ್ರೀ ಜೆಹೆಚ್ಆರ್ ವಕೀಲರಿಂದಃ</u>**

3 ಮತ್ತು 4 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಸೂಕ್ತ ಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು